ಯುವ ಪ್ರಣಾಳಿಕೆ

Youth Manifesto

KARNATAKA ASSEMBLY ELECTION - 2023



SOLIDARITY

YOUTH MOVEMENT KARNATAKA

ಸಾಲಿಡಾರಿಟಿ ಯೂತ್ ಮೂವ್‌ಮೆಂಟ್ ಕರ್ನಾಟಕ

ಸಾಲಿಡಾರಿಟಿ ಯುವ ಪ್ರಣಾಳಿಕೆ – 2023

ಮಾನವ ಸಂಪನ್ಮೂಲದಲ್ಲಿ ಯುವ ಸಮೂಹವು ಒಂದು ಪ್ರಮುಖ ವಿಭಾಗವಾಗಿದೆ. ರಾಜ್ಯದ ಜನ ಸಂಖ್ಯೆಯಲ್ಲಿ ಸರಿ ಸುಮಾರು 60% ಯುವಕ/ಯುವತಿಯರಿದ್ದಾರೆ. ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ಶಿಕ್ಷಣ, ವಿಜ್ಞಾನ, ತಂತ್ರಜ್ಞಾನ, ಕ್ರೀಡೆ, ಕಲೆ ಹಾಗೂ ಸಾಮಾಜಿಕ ಜಾಲತಾಣದಲ್ಲಿ ಯುವ ಸಮುದಾಯ ಅತ್ಯಂತ ಸಕ್ರಿಯವಾಗಿದೆ. ಆದ್ದರಿಂದ ಯುವಕರನ್ನು ಮತ್ತು ಅವರ ಚಿಂತನೆಗಳನ್ನು ಸಮರ್ಪಕವಾಗಿ ಸದುಪಯೋಗಿಸುವುದರಿಂದ ರಾಜ್ಯವನ್ನು ಉತ್ತಮ ರೀತಿಯಲ್ಲಿ ಅಭಿವೃದ್ಧಿಗೊಳಿಸಲು ಸಾಧ್ಯವಿದೆ.

ಇಂದು ರಾಜ್ಯದಲ್ಲಿ ಯುವಕ/ಯುವತಿಯರು ಹಲವಾರು ಸಾಮಾಜಿಕ, ಆರ್ಥಿಕ, ಆರೋಗ್ಯ ಮತ್ತು ಮಾನಸಿಕ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಕೋಮುಗಲಭೆ, ಮಾದಕ ವ್ಯಸನ, ಕೊಲೆ, ಸುಲಿಗೆ, ದರೋಡೆಗಳಲ್ಲಿ ತಮ್ಮನ್ನು ತೊಡಗಿಸಿಕೊಂಡು ಜೀವನ ಹಾಳುಗೆಡಹುತ್ತಾರೆ. ಖಿನ್ನತೆ ಮತ್ತು ಆತ್ಮಹತ್ಯೆಯಂತಹ ಪ್ರಕರಣದಲ್ಲಿ ಯುವ ಸಮೂಹದ ಸಂಖ್ಯೆ ಶೇಕಡಾವಾರು ಹೆಚ್ಚಾಗುತ್ತಿದೆ. ಇದಕ್ಕೆ ನಿರುದ್ಯೋಗ ಮತ್ತು ಶೈಕ್ಷಣಿಕ ನೆರವಿನ ಕೊರತೆಯು ಪ್ರಮುಖ ಕಾರಣವಾಗಿದೆ.

ಯುವಸಮುದಾಯವನ್ನು ಸ್ವಾವಲಂಬಿಗಳನ್ನಾಗಿಸುವುದು ಹಾಗೂ ಸಾಮಾಜದ ಮತ್ತು ಪರಿಸರದ ಬಗ್ಗೆ ಕಾಳಜಿ ಉಂಟಾಗುವ ಕಾರ್ಯ ಚಟುವಟಿಕೆಗಳನ್ನು ಆಯೋಜಿಸುವುದು, ಕಲೆ, ಸಾಹಿತ್ಯ, ಸಾಂಸ್ಕೃತಿಕ ರಂಗದಲ್ಲಿ ಹೆಚ್ಚಾಗಿ ತೊಡಗಿಸುವಂತೆ ಮಾಡುವ ಯೋಜನೆಗಳನ್ನು ಸರ್ಕಾರ ರೂಪಿಸುವುದು ಇಂದಿನ ಅಗತ್ಯ. ಈ ನಿಟ್ಟಿನಲ್ಲಿ ಸಾಲಿಡಾರಿಟಿ ಯೂಥ್ ಮೂವ್‌ಮೆಂಟ್–ಕರ್ನಾಟಕ ಮುಂಬರುವ 2023 ರ ವಿಧಾನಸಭಾ ಚುನಾವಣೆಯನ್ನು ಮುಂದಿಟ್ಟುಕೊಂಡು ಯುವಕರ ಸಬಲೀಕರಣಕ್ಕಾಗಿ ನಾಲ್ಕು ಪ್ರಮುಖ ವಿಷಯಗಳಲ್ಲಿ ಚುನಾವಣಾ ಪ್ರಣಾಳಿಕೆ ಸಿದ್ದಪಡಿಸಿರುತ್ತದೆ.

ಉದ್ಯೋಗ ಮತ್ತು ಆರ್ಥಿಕ ಸಬಲೀಕರಣ :

ಯುವ ಸಬಲೀಕರಣದಲ್ಲಿ ಉದ್ಯೋಗವು ಪ್ರಧಾನ ಘಟಕವಾಗಿದೆ. ಯುವಕರು ಹೆಚ್ಚಾಗಿ ಸ್ವಾವಲಂಬಿ ಜೀವನವನ್ನು ಬಯಸುತ್ತಾರೆ. ಉದ್ಯೋಗ ಸೃಷ್ಟಿಯ ಮುಖಾಂತರ ಸಾಮಾಜದಲ್ಲಿ ಯುವಕ/ಯುವತಿಯರಿಂದ ಉಂಟಾಗುವ ಮತ್ತು ಯುವ ಸಮುದಾಯವು ಅನುಭವಿಸುತ್ತಿರುವ ಹಲವಾರು ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಲು ಸಾಧ್ಯವಿದೆ. ನಿರುದ್ಯೋಗ ಮತ್ತು ಸರ್ಕಾರಿ ನೇಮಕಾತಿಗಳಲ್ಲಿ ಭ್ರಷ್ಟಾಚಾರದಿಂದಾಗಿ ಕರ್ನಾಟಕದಲ್ಲಿ ಪ್ರಸ್ತುತ 25 ಲಕ್ಷಕ್ಕೂ ಮಿಕ್ಕಿ ನಿರುದ್ಯೋಗಿಗಳಿದ್ದಾರೆ, ಸರ್ಕಾರಿ ಕಚೇರಿಗಳಲ್ಲಿ 2.52 ಲಕ್ಷ ಉದ್ಯೋಗಗಳು ಖಾಲಿ ಬಿದ್ದಿವೆ. ಸರ್ಕಾರಿ ಶಾಲೆಗಳು ಮತ್ತು ಪಿಯು ಕಾಲೇಜುಗಳಲ್ಲಿ 53,700 ಹುದ್ದೆಗಳು ಭರ್ತಿಯಾಗಿಲ್ಲ. ಸಣ್ಣ ಕೈಗಾರಿಕೆಗಳು ಮುಚ್ಚಿಹೋಗುತ್ತಿರುವ ಕಾರಣ 83,190

ಪುರುಷರು ಮತ್ತು ಮಹಿಳೆಯರು ನಿರುದ್ಯೋಗಿಗಳಾಗಿದ್ದಾರೆ. 2022ರ ಏಪ್ರಿಲ್ ಹೊತ್ತಿಗೆ ದೇಶದ ನಿರುದ್ಯೋಗದ ಪ್ರಮಾಣ ಶೇಕಡಾ 10.79ಕ್ಕೆ ಏರಿ ದಾಖಲೆ ನಿರ್ಮಿಸಿದೆ. ಕೇವಲ ನೋಟು ಅಮಾನೀಕರಣದಿಂದಾಗಿ 50 ಲಕ್ಷ ಜನ ಉದ್ಯೋಗ ಕಳೆದುಕೊಂಡಿದ್ದಾರೆ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳಲ್ಲಿ 62 ಲಕ್ಷ ಹುದ್ದೆಗಳು ಖಾಲಿ ಇವೆ. ಕೇವಲ ಕೇಂದ್ರ ಸರ್ಕಾರದಲ್ಲಿ 30 ಲಕ್ಷ ಉದ್ಯೋಗಗಳು ಖಾಲಿ ಇವೆ. ಪಿಎಸ್‌ಐ ನೇಮಕಾತಿ ಹಗರಣಕ್ಕೆ 1.29 ಲಕ್ಷ ಯುವ ಜನರು ಬಲಿಯಾಗಿದ್ದಾರೆ. ನಿರುದ್ಯೋಗದಿಂದ ಬೇಸತ್ತು ರಾಜ್ಯದಲ್ಲಿ 1,129 ವ್ಯಕ್ತಿಗಳು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ವಿಶ್ವಬ್ಯಾಂಕ್ ಮಾನವ ಸಂಪನ್ಮೂಲ ಸೂಚ್ಯಂಕದಲ್ಲಿ ವಿಶ್ವದ 174 ದೇಶಗಳಲ್ಲಿ ಭಾರತದ ಸ್ಥಾನ 116 ಆಗಿದೆ. ಗ್ರಾಮೀಣ ಬ್ಯಾಂಕಿಂಗ್ ಪರೀಕ್ಷೆಯನ್ನು ಕೂಡಾ ಹಿಂದಿ ಮತ್ತು ಇಂಗ್ಲೀಷ್ ಭಾಷೆಯಲ್ಲಿ ಮಾತ್ರ ಬರೆಯಬೇಕಾಗಿರುವ ಕಾರಣ ಈ ಬ್ಯಾಂಕ್‌ಗಳಲ್ಲಿ ಕೇವಲ ಶೇಕಡಾ 6ರಷ್ಟು ಮಾತ್ರ ಕನ್ನಡಿಗ ಉದ್ಯೋಗಿಗಳಿದ್ದಾರೆ. ಈ ಸಮಸ್ಯೆಗಳನ್ನು ಆದಷ್ಟು ಬೇಗ ಪರಿಹರಿಸಬೇಕಾಗಿದೆ. ನಿರುದ್ಯೋಗ ನಿವಾರಣೆಗೆ ಕೆಲವು ಸಲಹೆಗಳು ಮತ್ತು ಪರಿಹಾರ ಮಾರ್ಗಗಳು–

- ಬಹುರಾಷ್ಟ್ರೀಯ ಕಂಪೆನಿಗಳು, ಕಾರ್ಪೋರೇಟ್ ಕಂಪೆನಿಗಳಲ್ಲಿ ಸ್ಥಳೀಯ ಯುವಕ/ಯುವತಿಯರಿಗೆ ಶೇಕಡಾ 50 ವರೆಗೆ ವಿವಿಧ ಹುದ್ದೆಗಳಲ್ಲಿ ಅವಕಾಶ ನೀಡುವ ನೀತಿಯನ್ನು ರೂಪಿಸಬೇಕು.
- ಉದ್ಯೋಗ ಅವಕಾಶಗಳಿಗಾಗಿ ರಾಜ್ಯದ ಯುವಜನತೆಯನ್ನು ಸಜ್ಜುಗೊಳಿಸಲು ವಿವಿಧ ಜಿಲ್ಲೆಗಳಲ್ಲಿ ಕೌಶಲ ಕೇಂದ್ರಗಳನ್ನು ಸ್ಥಾಪಿಸಬೇಕು.
- ದೇಶದ ರಕ್ಷಣೆಗಾಗಿ ಸೈನ್ಯಕ್ಕೆ ಹಾಗೂ ಪೋಲೀಸ್ ಇಲಾಖೆಗೆ ಸೇರಲಿಚ್ಚಿಸುವವರಿಗೆ ನೇಮಕಾತಿಯ ಸಂದರ್ಭದಲ್ಲಿ ಉತ್ತಮ ವಸತಿ ಮತ್ತು ಪ್ರಯಾಣದ ಸೌಲಭ್ಯವನ್ನು ಒದಗಿಸುವುದು. ಈ ಕ್ಷೇತ್ರದಲ್ಲಿ ಅಲ್ಪಸಂಖ್ಯಾತ ಮತ್ತು ಕೆಳಜಾತಿಯ ಯುವಕರಿಗೆ ವಿಶೇಷ ಮೀಸಲಾತಿಯ ಮೂಲಕ ಹೆಚ್ಚು ಒತ್ತು ನೀಡಬೇಕು.
- "ಕರ್ನಾಟಕ ಕೌಶಲ್ಯ ಅಭಿವೃದ್ಧಿ ನಿಗಮ" ಮೂಲಕ ಎಲ್ಲಾ ಸರ್ಕಾರಿ ಮತ್ತು ಖಾಸಗಿ ವಲಯದ ಕಂಪನಿಗಳನ್ನು ಒಳಗೊಂಡ ಎಲ್ಲಾ ಜಿಲ್ಲೆಗಳಲ್ಲಿ ವಾರ್ಷಿಕ ಬೃಹತ್ ಉದ್ಯೋಗ ಮೇಳಗಳನ್ನು ಆಯೋಜಿಸಬೇಕು.
- ಎಲ್ಲಾ ಖಾಸಗಿ ಮತ್ತು ಸರ್ಕಾರಿ ಕಂಪನಿಗಳಲ್ಲಿ ಲಭ್ಯವಿರುವ ಖಾಲಿ ಹುದ್ದೆಗಳೊಂದಿಗೆ ಉದ್ಯೋಗ ಆಕಾಂಕ್ಷಿಗಳನ್ನು ಸಂಪರ್ಕಿಸಲು "ರಾಜ್ಯ ಮಟ್ಟದ ಸರ್ಕಾರಿ ಉದ್ಯೋಗ ಪೋರ್ಟಲ್" ಅನ್ನು ಅಭಿವೃದ್ಧಿಪಡಿಸಬೇಕು. ಎಲ್ಲಾ ಉದ್ಯೋಗಾಕಾಂಕ್ಷಿಗಳಿಗೆ ಇದು ಉಚಿತವಾಗಿ ದೊರೆಯುವಂತಿರಬೇಕು. ಈ ಮೂಲಕ ನಡೆಯುತ್ತಿರುವ ಉದ್ಯೋಗ ಹಗರಣಗಳಿಗೆ ಸ್ವಲ್ಪ ಮಟ್ಟಿಗೆ ಕಡಿವಾಣ ಬೀಳಬಹುದು.

- ದಕ್ಷ ಆಡಳಿತವನ್ನು ಖಚಿತಪಡಿಸಲು ಮತ್ತು ನಿರುದ್ಯೋಗವನ್ನು ಕಡಿಮೆ ಮಾಡಲು ರಾಜ್ಯ ಸರ್ಕಾರದಲ್ಲಿನ ಎಲ್ಲಾ ಖಾಲಿ ಹುದ್ದೆಗಳನ್ನು (ಸುಮಾರು 2.5 ಲಕ್ಷ) ಒಂದು ವರ್ಷದ ಕಾಲಮಿತಿಯಲ್ಲಿ ಭರ್ತಿ ಮಾಡಬೇಕು.
- ರಾಜ್ಯದಲ್ಲಿ ಉದ್ಯೋಗ ಸೃಷ್ಟಿಯನ್ನು ಖಚಿತಪಡಿಸಿಕೊಳ್ಳಲು, ವಿವಿಧ ವಲಯಗಳ ಪ್ರಮುಖ ಕಂಪನಿಗಳ ಪಾಲ್ಗೊಳ್ಳುವಿಕೆಯನ್ನು ಖಚಿತಪಡಿಸಿಕೊಳ್ಳಲು ವ್ಯಾಪಾರ ನೀತಿಗಳನ್ನು ಸುಲಭವಾಗಿ ರೂಪಿಸಬೇಕು.
- ಕರ್ನಾಟಕ ಕನಿಷ್ಠ ವೇತನ ಕಾಯಿದೆ 2023 ವಿವಿಧ ವರ್ಗಗಳಿಗೆ ಕನಿಷ್ಠ ವೇತನವನ್ನು ನಿರ್ದಿಷ್ಟಪಡಿಸುತ್ತದೆ, ಆದಾಗ್ಯೂ ಪ್ರಸ್ತುತ ಹಣದುಬ್ಬರವನ್ನು ಪರಿಗಣಿಸಿ, ಎಲ್ಲಾ ವರ್ಗಗಳಲ್ಲಿ ದೈನಂದಿನ ವೇತನದಲ್ಲಿ ಕನಿಷ್ಠ 50% ಹೆಚ್ಚಳದೊಂದಿಗೆ ಅದನ್ನು ಪರಿಷ್ಕರಿಸಲು ಶಿಫಾರಸು ಮಾಡಲಾಗಿದೆ.
- ಸಣ್ಣಪುಟ್ಟ ವ್ಯವಹಾರಗಳನ್ನು ಪ್ರಾರಂಭಿಸಲು ವಿಶೇಷ ಸ್ವಯಂ ಉದ್ಯೋಗ ಯೋಜನೆಯನ್ನು ರೂಪಿಸಬೇಕು ಮತ್ತು ಗುರುತಿಸಲಾದ ಸಣ್ಣ ವ್ಯಾಪಾರಗಳನ್ನು ಸ್ಥಾಪಿಸಲು ಮತ್ತು ನಡೆಸಲು ರೂ 25,000 ರಿಂದ ರೂ 40,000 ವರೆಗೆ ಅನುದಾನವನ್ನು ನೀಡಬೇಕು. ಬೀದಿ ವ್ಯಾಪಾರಿಗಳು, ಟೈಲರಿಂಗ್, ಗ್ರಾಫಿಕ್ ಡಿಸೈನಿಂಗ್ ಮತ್ತು ಇನ್ನಿತರ ವಿಭಾಗಗಳನ್ನು ಈ ಯೋಜನೆಯಡಿ ಸೇರಿಸಬಹುದು. 1.5 ಲಕ್ಷಕ್ಕಿಂತ ಕಡಿಮೆ ಆದಾಯ ಹೊಂದಿರುವ ವ್ಯಕ್ತಿಗಳು ಈ ಯೋಜನೆಯಿಂದ ಪ್ರಯೋಜನ ಪಡೆಯುತ್ತಾರೆ.
- ರಾಜ್ಯದ ಸುಮಾರು 80% ನೋಂದಾಯಿತ ಇನ್ಕ್ಯುಬೇಶನ್ ಕೇಂದ್ರಗಳನ್ನು ಬೆಂಗಳೂರಿನಲ್ಲಿ ಮಾತ್ರ ಇರಿಸಲಾಗಿದೆ. ಸ್ಟಾರ್ಟ್‌ಅಪ್ ಇಂಡಿಯಾ ಉಪಕ್ರಮದೊಂದಿಗೆ ರಾಜ್ಯದ ಯುವಜನರಲ್ಲಿ ಉದ್ಯಮಶೀಲತೆಯನ್ನು ಉತ್ತೇಜಿಸಲು ರಾಜ್ಯದ ಎಲ್ಲಾ ಪ್ರಮುಖ ಜಿಲ್ಲೆಗಳಲ್ಲಿ ಸ್ಟಾರ್ಟ್–ಅಪ್ ಇನ್‌ಕ್ಯುಬೇಟರ್‌ಗಳನ್ನು ಸ್ಥಾಪಿಸಲು ನಾವು ಶಿಫಾರಸು ಮಾಡುತ್ತೇವೆ.
- ಸಾಮಾಜಿಕ ಸಮಸ್ಯೆಗಳನ್ನು ಪರಿಹರಿಸುವ ಉದ್ದೇಶದಿಂದ ಪ್ರಾರಂಭವಾದ ಸ್ಟಾರ್ಟ್–ಅಪ್ ಗಳಿಗೆ ಬಡ್ಡಿ ರಹಿತ ಸಾಲ ನೀಡಲು ವಿಶೇಷ ಯೋಜನೆಯನ್ನು ರೂಪಿಸಬೇಕು. ಆ ಮೂಲಕ 3–7 ವರ್ಷಗಳವರೆಗೆ ಈ ಸಾಮಾಜಿಕ ಸ್ಟಾರ್ಟ್‌ಅಪ್‌ಗಳಿಗೆ 1 ಕೋಟಿವರೆಗೆ ಸಾಲವನ್ನು ನೀಡಬೇಕು.
- ಹಿಂದುಳಿದ ಸಮುದಾಯಗಳು ಮತ್ತು ಅಲ್ಪಸಂಖ್ಯಾತರ ಯುವಕರಲ್ಲಿ ಉದ್ಯಮಶೀಲತೆಯನ್ನು ಉತ್ತೇಜಿಸಲು, 3–5 ವರ್ಷಗಳವರೆಗೆ 25 ಲಕ್ಷದವರೆಗೆ ಬಡ್ಡಿರಹಿತ ಸಾಲವನ್ನು ನೀಡುವ ವಿಶೇಷ ಯೋಜನೆಯನ್ನು ರೂಪಿಸಬೇಕು.
- ಸ್ಟಾರ್ಟ್–ಅಪ್ ಇಂಡಿಯಾ ಅಥವಾ ಇತರ ಸಂಬಂಧಿತ

ಯೋಜನೆಗಳಂತಹ ಅಸ್ತಿತ್ವದಲ್ಲಿರುವ ಯೋಜನೆಗಳ ಅಡಿಯಲ್ಲಿ ಒಳಗೊಳ್ಳದ ಸಾಮಾನ್ಯ ಸ್ಟಾರ್ಟ್-ಅಪ್‌ಗಳಿಗೆ ಹೊಸ ಯೋಜನೆಯನ್ನು ರೂಪಿಸುವ ಮೂಲಕ ಸೂಕ್ತವಾದ ಹಣಕಾಸಿನ ನೆರವು ಮತ್ತು ತಾಂತ್ರಿಕ ಮಾರ್ಗದರ್ಶನವನ್ನು ಒದಗಿಸಬೇಕು.

- MSME ಮೂಲಕ ಮಹಿಳಾ ಉದ್ಯಮ ಅಭಿವೃದ್ಧಿ ಯೋಜನೆಯಡಿ, ಗರಿಷ್ಠ ಯೋಜನಾ ವೆಚ್ಚವನ್ನು ಕನಿಷ್ಠ 25 ಲಕ್ಷ ರೂ.ಗಳಿಗೆ ಹೆಚ್ಚಿಸಬೇಕು ಮತ್ತು ಬಡ್ಡಿದರಗಳನ್ನು 0% ರಷ್ಟು ಕಡಿಮೆಗೊಳಿಸಬೇಕು.
- ಎಲ್ಲಾ ಸರ್ಕಾರಿ ಏಜೆನ್ಸಿಗಳಿಂದ ಬಾಕಿ ಉಳಿದಿರುವ ಎಲ್ಲಾ ನೇಮಕಾತಿ ಪರೀಕ್ಷೆಗಳನ್ನು ಮುಂದಿನ ಆರು ತಿಂಗಳೊಳಗೆ ನಡೆಸಬೇಕು. ಮತ್ತು ಅಂತಹ ಎಲ್ಲಾ ಪರೀಕ್ಷೆಗಳ ಬಾಕಿ ಉಳಿದಿರುವ ಫಲಿತಾಂಶಗಳು ಮತ್ತು ನೇಮಕಾತಿ ಪ್ರಕ್ರಿಯೆಯನ್ನು ನಾಲ್ಕು ತಿಂಗಳೊಳಗೆ ಘೋಷಿಸಬೇಕು ಮತ್ತು ಪೂರ್ಣಗೊಳಿಸಬೇಕು.
- ರಾಜ್ಯ ಸರ್ಕಾರದ ಎಲ್ಲಾ ಇಲಾಖೆಗಳಿಂದ ಎಲ್ಲಾ ಸರ್ಕಾರಿ ನೇಮಕಾತಿ ಪರೀಕ್ಷೆಗಳಲ್ಲಿ ಫಲಿತಾಂಶ ಘೋಷಣೆ, ಸಂದರ್ಶನ ಮತ್ತು ಆಯ್ಕೆ ಪ್ರಕ್ರಿಯೆಯನ್ನು ಸಮಯಕ್ಕೆ ತಕ್ಕದಾಗಿ ಪೂರ್ಣಗೊಳಿಸಬೇಕು. ಆರು ತಿಂಗಳೊಳಗೆ ಸಂಪೂರ್ಣ ನೇಮಕಾತಿ ಪ್ರಕ್ರಿಯೆಯನ್ನು ಮುಕ್ತಾಯಗೊಳಿಸಲು ನೀತಿಯನ್ನು ಮಾಡಬೇಕು.
- ಸರ್ಕಾರಿ ಮತ್ತು ಖಾಸಗಿ ವಲಯಗಳಲ್ಲಿನ ನೇಮಕಾತಿ ಹಗರಣಗಳನ್ನು ಪರಿಶೀಲಿಸಲು ಮತ್ತು ಎದುರಿಸಲು ಹಾಗೂ ಸಂತ್ರಸ್ತರಿಗೆ ತಕ್ಷಣದ ನ್ಯಾಯ ಒದಗಿಸಲು ವಿಶೇಷ ತ್ವರಿತ ನ್ಯಾಯಾಲಯಗಳನ್ನು ರಚಿಸಬೇಕು. ಅಂತಹ ಎಲ್ಲಾ ಪ್ರಕರಣಗಳನ್ನು ಸಮಯಕ್ಕೆ ಸರಿಯಾಗಿ ಅಂದರೆ ಆರು ತಿಂಗಳೊಳಗೆ ಪೂರ್ಣಗೊಳಿಸಬೇಕು.

ಕ್ರೀಡಾ ಸಬಲೀಕರಣ:

ಯುವಕರು ಅತೀ ಹೆಚ್ಚು ಉತ್ಸುಕರಾಗುವ ಕ್ಷೇತ್ರ ಕ್ರೀಡೆ ಆಗಿದೆ. ಯುವಕರು ದೈಹಿಕ ಕ್ಷಮತೆಯನ್ನು ಕಾಯ್ದುಕೊಂಡಲ್ಲಿ ಉತ್ತಮ ಆರೋಗ್ಯದಿಂದಿರುತ್ತಾರೆ. ರಾಜ್ಯದ ಸರಿ ಸುಮಾರು 240 ತಾಲೂಕುಗಳಲ್ಲಿ 121 ತಾಲೂಕು ಕ್ರೀಡಾಂಗಣ ಮಾತ್ರವಿದೆ. ಅದರಲ್ಲಿ ಹಲವು ಕಡೆ ಅನುದಾನದ ಕೊರತೆ ಎದುರಾಗಿದೆ. ಕೋವಿಡ್ ನಂತರ ಕ್ರೀಡೆ ಮತ್ತು ಯುವ ಸಬಲೀಕರಣ ಇಲಾಖೆ ಸರಿಯಾಗಿ ಕಾರ್ಯ ನಿರ್ವಹಿಸುತ್ತಿಲ್ಲ ಎಂಬ ಆರೋಪ ಕೂಡ ಇದೆ. ಕ್ರೀಡೆ ಮತ್ತು ಕ್ರೀಡಾಪಟುಗಳ ಬಗ್ಗೆ ಸರಿಯಾದ ಕಾಳಜಿ ಇಲ್ಲದ ಕಾರಣ ಉತ್ತಮ ತರಬೇತುದಾರರ ಕೊರತೆ, ಕ್ರೀಡಾ ಸಲಕರಣೆಗಳು ಸರಿಯಾಗಿ ಲಭ್ಯವಾಗದ ಕಾರಣದಿಂದ ರಾಜ್ಯದ ಕ್ರೀಡಾ ಬೆಳವಣಿಗೆ ದುರಾವಸ್ಥೆಯಲ್ಲಿದೆ. ಅಂತರಾಷ್ಟ್ರೀಯ ಮಟ್ಟದಲ್ಲಿ ಕರ್ನಾಟಕದ ಪ್ರಾತಿನಿಧ್ಯ ಕನಿಷ್ಠ ಮಟ್ಟದಲ್ಲಿದೆ.

- ಪ್ರತಿಯೊಂದು ಕ್ಷೇತ್ರದಲ್ಲೂ ಸಾರ್ವಜನಿಕ ಕ್ರೀಡಾಂಗಣ, ಸ್ವಿಮ್ಮಿಂಗ್ ಪೂಲ್, ಪಾರ್ಕ್ ನಿರ್ಮಿಸುವುದು. ಧಾರವಾಡ, ಹೆಜಮಾಡಿ, ತುಮಕೂರು, ಮಂಗಳೂರು, ಬೆಂಗಳೂರು ಹಾಗೂ ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಸ್ಥಗಿತಗೊಂಡಿರುವ ಕ್ರೀಡಾಂಗಣ, ಕ್ರೀಡಾ ಸಂಕೀರ್ಣ, ಪೆವಿಲಿಯನ್, ಈಜುಕೋಳ, ಕೋರ್ಟು ಇತ್ಯಾದಿಗಳ ಕಾಮಗಾರಿ ಶೀಘ್ರದಲ್ಲಿ ಪೂರ್ತಿಗೊಳಿಸಬೇಕು

- ಗ್ರಾಮೀಣ ಮತ್ತು ಸಾಂಪ್ರದಾಯಿಕ ಹಾಗೂ ಪ್ರಾದೇಶಿಕ ಕ್ರೀಡೆಗಳಾದ ಖೋ–ಖೋ, ಕುಸ್ತಿ, ಕಬಡ್ಡಿ, ಕಂಬಳ, ಎತ್ತಿನಗಾಡಿ ಓಟ, ಲಗೋರಿ ಮುಂತಾದವುಗಳನ್ನು ಬೆಳೆಸಲು ಗ್ರಾಮ ಮಟ್ಟದಿಂದ ರಾಜ್ಯ ಮಟ್ಟದವರೆಗೆ ಗ್ರಾಮೀಣ ಕ್ರೀಡಾಕೂಟಗಳನ್ನು ಆಯೋಜಿಸಬೇಕು. ಪ್ರತಿ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಸುಸಜ್ಜಿತವಾದ ಕ್ರೀಡಾ ಅಂಕಣವನ್ನು ನಿರ್ಮಿಸಬೇಕು. ಪ್ರಾದೇಶಿಕ ಕ್ರೀಡೆಗಳನ್ನು (ಒಳಾಂಗಣ ಮತ್ತು ಹೊರಾಂಗಣ) ಬೆಳೆಸುವ ಮತ್ತು ಉಳಿಸುವ ನಿಟ್ಟಿನಲ್ಲಿ ಅವುಗಳಿಗೆ ವಿಶೇಷ ನಿಗಮಗಳನ್ನು ಸ್ಥಾಪಿಸಬೇಕು.

- ಕ್ರೀಡೆಗಳಲ್ಲಿ ವಿಶೇಷ ಸೇವೆ ಸಲ್ಲಿಸಿದ ಸ್ಥಳೀಯ ಹಾಗೂ ಜಿಲ್ಲಾ ಮತ್ತು ರಾಜ್ಯಮಟ್ಟದಲ್ಲಿ ಗುರುತಿಸಿಕೊಂಡವರ ಆರೋಗ್ಯದ ದೃಷ್ಟಿಯಿಂದ ಹೊಸ ಯೋಜನೆ ರೂಪಿಸುವುದು. ವಿಕಲ ಚೇತನರಾದ ಕ್ರೀಡಾ ಪಟುಗಳಿಗೆ ಮಾಸಿಕ ವೇತನ ನೀಡಬೇಕು. ಪ್ರಾದೇಶಿಕವಾಗಿ ಗುರುತಿಸಿಕೊಂಡಿರುವ ಕ್ರೀಡಾಪಟುಗಳನ್ನು ಪ್ರೋತ್ಸಾಹಿಸಬೇಕು ಮತ್ತು ಅವರು ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ಬೆಳೆಯಲು ಪೂರಕವಾದ ಯೋಜನೆಗಳನ್ನು ರೂಪಿಸಬೇಕು.

- ಪ್ರತಿಯೊಂದು ಗ್ರಾಮದಲ್ಲಿ ಯುವಕ ಮಂಡಲಗಳನ್ನು ಸ್ಥಾಪಿಸಬೇಕು. ಕ್ರೀಡಾ ಸಲಕರಣೆಗಳನ್ನು ಉಚಿತವಾಗಿ ನೀಡಬೇಕು.

- ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಕ್ರೀಡೆಯಲ್ಲಿ ಮಹಿಳಾ ಪ್ರಾತಿನಿಧ್ಯ ಹೆಚ್ಚಾಗುವಂತೆ ಪ್ರಯತ್ನಿಸಬೇಕು. ಮಹಿಳೆಯರಿಗೆ ಮಾತ್ರ ಮೀಸಲಾಗಿರುವ ಹಾಗೂ ವಸತಿ ಸೌಕರ್ಯಗಳನ್ನು ಹೊಂದಿರುವ ಸುರಕ್ಷಿತ ಕ್ರೀಡಾಂಗಣ ರಾಜ್ಯದ ಪ್ರಮುಖ ಜಿಲ್ಲೆಗಳಲ್ಲಿ ನಿರ್ಮಿಸಬೇಕು. ಫುಟ್ಬಾಲ್, ಬಾಸ್ಕೇಟ್ ಬಾಲ್, ಈಜು, ಹ್ಯಾಂಡ್ ಬಾಲ್, ಹಾಕಿ, ಟೆನ್ನಿಸ್, ಜಿಮ್ನಾಸ್ಟಿಕ್ ಕ್ರೀಡೆಗಳಿಗಾಗಿ ಸುಸಜ್ಜಿತ ವ್ಯವಸ್ಥೆಯನ್ನು ಕಲ್ಪಿಸಬೇಕು.

- ಕರ್ನಾಟಕದಲ್ಲಿ ಕೇವಲ ಒಂದು ಕ್ರೀಡಾಂಗಣ (ಎಂ ಚಿನ್ನಸ್ವಾಮಿ ಕ್ರೀಡಾಂಗಣ ಬೆಂಗಳೂರು) ಮಾತ್ರ ಪೂರ್ಣ ಪ್ರಮಾಣದ ಅಂತರಾಷ್ಟ್ರೀಯ ಕ್ರಿಕೆಟ್ ಆಯೋಜಿಸಲು ಯೋಗ್ಯವಾಗಿದೆ. ಕರಾವಳಿ ಪ್ರದೇಶದಲ್ಲಿ ಯುವಕರು ಹೆಚ್ಚಾಗಿ ಕ್ರಿಕೆಟ್ ಮತ್ತು ಫುಟ್ಬಾಲ್ ಕ್ರೀಡೆಯ ಕಡೆಗೆ ಒಲವು

ಹೊಂದಿರುವುದರಿಂದ ಮಂಗಳೂರು ಕೇಂದ್ರವಾಗಿಟ್ಟುಕೊಂಡು ಅಂತರರಾಷ್ಟ್ರೀಯ ಮಟ್ಟದ ಕ್ರೀಡಾಂಗಣ ನಿರ್ಮಿಸಬೇಕು. (ಇದೀಗಾಗಲೇ ಈ ಯೋಜನೆ ಜಾರಿಯಲ್ಲಿರುವ ಕಾರಣ ಆದಷ್ಟು ಬೇಗ ಕಾಮಗಾರಿ ಪ್ರಾರಂಭಿಸಬೇಕು)

ಕಲೆ, ಸಾಹಿತ್ಯ ಮತ್ತು ಸಂಸ್ಕೃತಿ :

ಇತ್ತೀಚೆಗಿನ ದಿನಗಳಿಂದ ಕಲೆ ಸಾಹಿತ್ಯ ಮತ್ತು ಸಾಂಸ್ಕೃತಿಕ ರಂಗದಲ್ಲಿ ಯುವಕರ ಭಾಗವಹಿಸುವಿಕೆಯ ಪ್ರಮಾಣ ಹೆಚ್ಚಾಗುತ್ತಿದೆ. ಇದು ಒಂದು ಒಳ್ಳೆಯ ಬೆಳವಣಿಗೆಯಾದುದರಿಂದ ಅವರನ್ನು ಬೆಂಬಲಿಸಿ ಪ್ರೋತ್ಸಾಹಿಸುವುದು ಆಡಳಿತ ವರ್ಗದ ಜವಾಬ್ದಾರಿಯಾಗಿರುತ್ತದೆ. ಈ ನಿಟ್ಟಿನಲ್ಲಿ ನಾಡಿನ ಕಲೆ, ಸಾಹಿತ್ಯ, ಸಂಗೀತ, ಜಾನಪದ, ನೃತ್ಯ, ಸಿನಿಮಾ, ನಾಟಕ ಹಾಗೂ ಇತರ ಪ್ರಾದೇಶಿಕ ಕಲಾ ಪ್ರಕಾರಗಳನ್ನು ಉಳಿಸುವ ಮತ್ತು ಬೆಳೆಸುವ ಕೆಲಸವಾಗಬೇಕು. ಸಾಂಸ್ಕೃತಿಕ ರಂಗದಲ್ಲಿ ಯುವಕರ ತೊಡಗಿಸುವಿಕೆ ಒಂದು ಸಕರಾತ್ಮಕ ಬೆಳವಣಿಗೆಯಾಗಿದೆ. ಅನುದಾನದ ಕೊರತೆಯಿಂದ ಹಲವಾರು ಸಾಂಸ್ಕೃತಿಕ ಯೋಜನೆಗಳು ನೆನೆಗುದಿಗೆ ಬಿದ್ದಿದೆ. ಆರ್ಥಿಕ ಸಂಕಷ್ಟಕ್ಕೆ ಸಿಲುಕಿ ಹಲವು ಕಲಾ ಸಾಂಸ್ಕೃತಿಕ ಸಂಘ ಸಂಸ್ಥೆಗಳು ಮುಚ್ಚಿಹೋಗುತ್ತಿದೆ. ಪ್ರಭಾವಿಗಳು ಹಾಗೂ ಗಣ್ಯರ ಶಿಫಾರಸ್ಸಿನ ಮೇರೆಗೆ ಅನಧಿಕೃತ ಸಂಸ್ಥೆಗಳು ಸರ್ಕಾದಿಂದ ದೇಣಿಗೆ ಪಡೆದು ಲಾಭಗಳಿಸುತ್ತಿದೆ ಎಂಬ ಆರೋಪವೂ ಇದೆ. ರಾಜ್ಯದಲ್ಲಿ ಒಂದು ಅಂದಾಜು ಪ್ರಕಾರ 7000 ಸಾಂಸ್ಕೃತಿಕ ಸಂಘ ಸಂಸ್ಥೆಗಳಿವೆ. ಅದರಲ್ಲಿ 900 ರಿಂದ 1000 ಸಾಂಸ್ಕೃತಿಕ ಸಂಘ ಸಂಸ್ಥೆಗಳಿಗೆ ಅನುದಾನ ಲಭಿಸಿದರೆ ಉಳಿದವುಗಳು ಅನುದಾನದಿಂದ ವಂಚಿತಗೊಳ್ಳುತ್ತದೆ. ಹೆಚ್ಚಾಗಿ ಉತ್ತರ ಕರ್ನಾಟಕದ ಸಾಂಸ್ಕೃತಿಕ ಸಂಘ ಸಂಸ್ಥೆಗಳು ಈ ಸಮಸ್ಯೆಯನ್ನು ಎದುರಿಸುತ್ತಿದೆ.

- ಸಾಂಸ್ಕೃತಿಕ ಸಂಘ ಸಂಸ್ಥೆಗಳಿಗೆ ನೀಡುವ ದೇಣಿಗೆ ರೂಪದ ಅನುದಾನದಲ್ಲಿ ಪಾರದರ್ಶಕತೆಯನ್ನು ತೋರಿಸಬೇಕು. ಖ್ಯಾತ ಸಾಹಿತಿ ಪ್ರೊ. ಎಸ್. ಜಿ. ಸಿದ್ಧರಾಮಯ್ಯರ ಬೇಡಿಕೆಯಂತೆ ಸಾಂಸ್ಕೃತಿಕ ಪರಿಶೀಲನಾ ಸಮಿತಿ ರಚಿಸಬೇಕು.

- ನಾಟಕ ರಂಗದಲ್ಲಿ ಹೊಸದಾಗಿ ಹಲವಾರು ಯುವ ಕಲಾವಿದರು ರಂಗಭೂಮಿಗೆ ಪಾದಾರ್ಪಣೆಗೆಯ್ಯುತ್ತಿದ್ದಾರೆ. ರಂಗಮಂದಿರದ ಕೊರತೆಯೂ ರಾಜ್ಯದ ಕಲಾವಿದರು ಅನುಭವಿಸುವ ದೊಡ್ಡ ಸಮಸ್ಯೆ. ಬೆಂಗಳೂರು, ಮೈಸೂರು, ದಾರವಾಡದ ಹೊರತು ರಾಜ್ಯದ ಬಹುತೇಕ ಜಿಲ್ಲೆಗಳಲ್ಲಿ ಪೂರ್ಣ ಪ್ರಮಾಣದ ಸುಸಜ್ಜಿತವಾದ ಅತ್ಯಾಧುನಿಕ ತಂತ್ರಜ್ಞಾನಗಳನ್ನೊಳಗೊಂಡ ರಂಗಮಂದಿರಗಳಿಲ್ಲ. ಹೆಚ್ಚಿನ ಕಡೆಗಳಲ್ಲಿ ನಾಟಕ, ಸಂಗೀತ, ಸಾಹಿತ್ಯ ವಿಚಾರ, ಸಾಂಸ್ಕೃತಿಕ ಕಲಾ ಪ್ರದರ್ಶನ ಹಾಗೂ ಸಾಂಸ್ಕೃತಿಕ ಉತ್ಸವಗಳಿಗೆ ಸೂಕ್ತ ವೇದಿಕೆಗಳಿಲ್ಲ. ಖಾಸಗಿ ಕಲ್ಯಾಣ ಮಂಟಪಗಳನ್ನು ಅವಲಂಭಿಸುವ ಪರಿಸ್ಥಿತಿ ಎದುರಾಗಿದೆ. ಆದ್ದರಿಂದ ಎಲ್ಲಾ

ತಾಲೂಕುಗಳಲ್ಲಿ ರಂಗಮಂದಿರ ನಿರ್ಮಾಣವಾಗಬೇಕು. ಸ್ಮಾರ್ಟ್ ಸಿಟಿಗಳಾಗಿ ಬೆಳೆಯುತ್ತಿರುವ ಬೆಂಗಳೂರು, ಮಂಗಳೂರು, ತುಮಕೂರು, ದಾವಣಗೆರೆಯಲ್ಲಿ ಮಿನಿ ರಂಗಮಂದಿರಗಳು ನಿರ್ಮಾಣವಾಗಬೇಕು. ಪ್ರತಿಯೊಂದು ಜಿಲ್ಲೆಗಳಲ್ಲಿ ಕಲಾ ಭವನ, ರಂಗ ಮಂದಿರ, ಪುರಭವನ, ಬಯಲು ರಂಗ ಮಂದಿರದ ಅಗತ್ಯವಿದೆ.

- ಸಿನಿಮಾ ರಂಗದಲ್ಲಿ ಹೊಸ ಯುವಕರು ಪಾದಾರ್ಪಣೆಗೆಯ್ಯುತ್ತಿರುವುದು ಇಂದಿನ ವಿಶೇಷತೆ. ಹೊಸ ತಲೆಮಾರು ಸಿನಿಮಾ ಕಾಲದ ಬೇಡಿಕೆಯಾಗಿದ್ದು, ಹೊಸ ಅಭಿರುಚಿಯ ಸಿನಿಮಾಗಳೊಂದಿಗೆ ಯುವಕರು ಬರುತ್ತಿದ್ದಾರೆ. ಆದ್ದರಿಂದ ಯುವಕರಿಗೆ ಸಿನಿಮಾ/ಕಿರು ಚಿತ್ರ ನಿರ್ದೇಶಿಸಲು ವಿಶೇಷ ಸಾಲ ಸೌಲಭ್ಯ ಒದಗಿಸುವ ಬಗ್ಗೆ ಆಲೋಚಿಸಬೇಕು. ದಿವಂಗತ ನಟ ಪುನೀತ್ ರಾಜ್ ಕುಮಾರ್ ಹೆಸರಿನಲ್ಲಿ ಯುವ ಸಿನಿಮಾ ಪ್ರತಿಭೆಗಳನ್ನು ಪ್ರೋತ್ಸಾಹಿಸಲು ವಿಶೇಷ ಅನುದಾನ ಬಿಡುಗಡೆ ಮಾಡಬೇಕು. ಇದೀಗಾಗಲೇ ಘೋಷಣೆಯಾದ ಚಿತ್ರನಗರಿಯ ಕಾಮಗಾರಿ ಆದಷ್ಟು ಶೀಘ್ರದಲ್ಲಿ ಪ್ರಾರಂಭಿಸಬೇಕು.
- ಕನ್ನಡ ಹಾಗೂ ಪ್ರಾದೇಶಿಕ ಭಾಷೆಗಳಲ್ಲಿ ಹಲವಾರು ಯುವ ಲೇಖಕರು ಬೆಳೆದು ಬರುತ್ತಿದ್ದಾರೆ. ಕೃತಿಗಳ ಪ್ರಕಾಶನ ಒಂದು ಸಮಸ್ಯೆಯಾಗಿದ್ದು ಯುವ ಬರಹಗಾರರ ಕೃತಿಗಳನ್ನು ಪ್ರಕಟಿಸಲು ವಿಶೇಷ ಅನುದಾನ ಬಿಡುಗಡೆ ಮಾಡಬೇಕು
- ಅಳಿವಿನಂಚಿನಲ್ಲಿರುವ ಪ್ರಾದೇಶಿಕ ಜಾನಪದ ಕಲೆಗಳನ್ನು ಉಳಿಸುವ ಹೊಸ ಯೋಜನೆ ಹಾಕಬೇಕು

ಆರೋಗ್ಯ:

ಆರೋಗ್ಯವೂ ಯುವಕರ ಸಂತೋಷ ಮತ್ತು ಯೋಗಕ್ಷೇಮಕ್ಕೆ ಅಗತ್ಯವಾಗಿದೆ. ಅವರು ಆರ್ಥಿಕವಾಗಿ ಸಬಲರಾಗಲು ಸಹಕಾರಿಯಾಗುತ್ತದೆ. ಇದು ರಾಜ್ಯದ ಅಭಿವೃದ್ಧಿಯಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ಆನಾರೋಗ್ಯ, ಅಪೌಷ್ಟಿಕತೆ ಇಂದಿನ ಯುವ ಜನತೆ ಎದುರಿಸುತ್ತಿರುವ ದೊಡ್ಡ ಸಮಸ್ಯೆ. ಹೃದಯಾಘಾತ, ಪಾರ್ಶ್ವವಾಯು, ಕ್ಯಾನ್ಸರ್ ಮುಂತಾದ ರೋಗಗಳಿಗೆ ತುತ್ತಾಗುವುದರೊಂದಿಗೆ ಮಾದಕ ವ್ಯಸನಕ್ಕೂ ಹೆಚ್ಚಾಗಿ ಬಲಿಯಾಗುತ್ತಿದ್ದಾರೆ. ಮಾನಸಿಕ ಖಿನ್ನತೆಗೊಳಗಾಗಿ ಕ್ಷುಲ್ಲಕ ಕಾರಣಕ್ಕೆ ಆತ್ಮಹತ್ಯೆ ಪ್ರಕರಣಗಳ ಸಂಖ್ಯೆಯೂ ಹೆಚ್ಚಾಗುತ್ತಿದೆ. ಯುವತಿಯರಲ್ಲಿ ಆತಂಕ (Anxiety) ಒಂದು ಗಂಭೀರ ಸಮಸ್ಯೆಯಾಗಿದೆ.

- ಇಂದು ರಾಜ್ಯದ ಯುವಕ/ಯುವತಿಯರಲ್ಲಿ 18% ಜನ ಒಂದಲ್ಲಾ ಒಂದು ರೀತಿಯ ಕೌಟುಂಬಿಕ ಅಥವಾ ವೈಯಕ್ತಿಕ ಸಮಸ್ಯೆಗಳಿಂದ ಮಾನಸಿಕ ಖಿನ್ನತೆಗೆ ಒಳಗಾಗಿದ್ದಾರೆ ಅವರಲ್ಲಿ ಕೆಲವರು ಆತ್ಮಹತ್ಯೆಯೇ ಪರಿಹಾರ ಎಂದು ಭಾವಿಸುತ್ತಾರೆ. ಇದು ರಾಜ್ಯದ ದೊಡ್ಡ ಸಮಸ್ಯೆಯಲ್ಲೊಂದು.

ಕೋವಿಡ್ ನಂತರ ಇದರ ಪ್ರಮಾಣ ಹೆಚ್ಚಾಗುತ್ತಿದೆ. ವಿವಿಧ ಕಾರಣಗಳಿಂದಾಗಿ ಮಾನಸಿಕ ಖಿನ್ನತೆಯನ್ನು ಎದುರಿಸುತ್ತಿರುವ ಯುವಕ/ಯುವತಿಯರಿಗಾಗಿ ಪ್ರತಿಯೊಂದು ಗ್ರಾಮದ ಆರೋಗ್ಯ ಕೇಂದ್ರದಲ್ಲಿ ಕೌನ್ಸೆಲಿಂಗ್ ಸೆಂಟರ್ ತೆರೆಯಬೇಕು. ಮಾತ್ರವಲ್ಲದೆ, ಅದು ಇನ್ನಷ್ಟು ಸಮರ್ಪಕವಾಗಿ ಕಾರ್ಯನಿರ್ವಹಿಸುವಂತೆ ಯೋಜನೆಯನ್ನು ರೂಪಿಸಬೇಕು.

- ಮಾದಕ ವ್ಯಸನವು ರಾಜ್ಯದಲ್ಲಿ ಬಡತನ, ನಿರುದ್ಯೋಗ, ಭಯೋತ್ಪಾದನೆ ಮತ್ತು ಅನಾರೋಗ್ಯವನ್ನು ಹರಡಲು ಕಾರಣವಾಗುತ್ತದೆ. ಮಾದಕ ವ್ಯಸನ ನಿವಾರಣೆಗೆ ಸರಕಾರ ಕಠಿಣ ಕ್ರಮ ಕೈಗೊಳ್ಳಬೇಕು. ಈ ವ್ಯಸನಕ್ಕೆ ತುತ್ತಾಗಿರುವರನ್ನು ಸರಿದಾರಿಗೆ ತರಲು ಪ್ರತಿಯೊಂದು ಕ್ಷೇತ್ರದಲ್ಲಿ ಪುನರ್ವಸತಿ ಕೇಂದ್ರಗಳನ್ನು (Rehabilitation centres) ಡಿ–ಅಡಿಕ್ಷನ್ ಸೆಂಟರ್ ಮತ್ತು ಆಪ್ತ ಸಮಾಲೋಚನಾ ಕೇಂದ್ರಗಳನ್ನು ತೆರೆಯಬೇಕು.
- ಹಳ್ಳಿ – ಪಟ್ಟಣಗಳ ವ್ಯತ್ಯಾಸವಿಲ್ಲದೆ ಹರಡಿರುವ ಮಾದಕ ವ್ಯಸನದ ಮಾರಾಟದ ಜಾಲವನ್ನು ಭೇದಿಸಲು ವಿಶೇಷ ಪಡೆಯನ್ನು ನಿಯೋಜಿಸಬೇಕು. ಈ ಸಂಬಂಧಿ ಬಂಧಿಸಲ್ಪಟ್ಟವರನ್ನು ತಕ್ಷಣ ಬಿಡುಗಡೆಗೊಳಿಸದೆ ಕೌನ್ಸಿಲಿಂಗ್ ಮಾಡಿಸಬೇಕು. ಮಾದಕ ವ್ಯಸನ ಅವರಿಂದ ಸಂಪೂರ್ಣ ತೊರೆದು ಹೋಗುವಂತೆ ಪ್ರಯತ್ನಿಸಬೇಕು.
- ಗ್ರಾಮ ಮಟ್ಟದಲ್ಲಿ ಉಚಿತ ಜಿಮ್ ಮತ್ತು ಯೋಗಾಭ್ಯಾಸ ತರಬೇತಿ ಕೇಂದ್ರಗಳನ್ನು ತೆರೆಯಬೇಕು.
- ಆರೋಗ್ಯಕರ ಜೀವನದ ಹಕ್ಕು ನಮ್ಮ ಸಂವಿಧಾನದಲ್ಲಿ ಪ್ರತಿಪಾದಿಸಿರುವ "ಗೌರವಯುತ ಜೀವನದ ಹಕ್ಕು" ಇದರ ಅವಿಭಾಜ್ಯ ಅಂಗವಾಗಿದೆ. ಆದ್ದರಿಂದ ಎಲ್ಲಾ ನಾಗರಿಕರಿಗೆ ಉಚಿತ ಸಾರ್ವತ್ರಿಕ ಆರೋಗ್ಯ ಸೇವೆಯನ್ನು ಒದಗಿಸಲು ಕ್ರಮಗಳನ್ನು ತೆಗೆದುಕೊಳ್ಳಬೇಕು.
- ಸದ್ಯ ಕೆಲವು ರೋಗಗಳು ಮಾತ್ರ ಸರ್ಕಾರದ ವಿವಿಧ ಯೋಜನೆಗಳ ಅಡಿಯಲ್ಲಿ ಒಳಗೊಳ್ಳುತ್ತವೆ. ಆದರೆ ಎಲ್ಲಾ ರೋಗಗಳನ್ನು ವಿವಿಧ ಯೋಜನೆಗಳ ಅಡಿಯಲ್ಲಿ ತರುವುದು ಮತ್ತು ಎಲ್ಲಾ ನಾಗರಿಕರಿಗೆ ಉಚಿತ ಆರೋಗ್ಯವನ್ನು ಖಾತರಿಪಡಿಸುವುದು ಕಾಲದ ತುರ್ತು ಜರೂರತ್ತಾಗಿದೆ. ಅಲ್ಲದೆ, ಹೆಚ್ಚಿನ ನಾಗರಿಕರು ಲಾಭ ಪಡೆಯುವಂತಾಗಲು ಈ ಯೋಜನೆಗಳ ಅರ್ಹತಾ ಮಾನದಂಡಗಳನ್ನು ಪರಿಷ್ಕರಿಸಬೇಕು.
- ಪ್ರತೀ ತಾಲೂಕು ಮತ್ತು ಜಿಲ್ಲಾ ಸರ್ಕಾರಿ ಆಸ್ಪತ್ರೆಗಳನ್ನು ಎಲ್ಲಾ ರೀತಿಯ ರೋಗಗಳ ಚಿಕಿತ್ಸೆಗಾಗಿ ಲಭ್ಯವಿರುವ ಆಧುನಿಕ ವೈದ್ಯಕೀಯ ಸೌಲಭ್ಯಗಳೊಂದಿಗೆ ಸುಸಜ್ಜಿತ ಮತ್ತು ಕ್ರಿಯಾತ್ಮಕಗೊಳಿಸಬೇಕು.

ಕೃಷಿ:

ಇತ್ತೀಚೆಗಿನ ದಿನಗಳಲ್ಲಿ ಯುವಕರು ಕೃಷಿಯ ಕಡೆಗೆ ಆಸಕ್ತಿ ತೋರಿಸುತ್ತಿದ್ದಾರೆ. ಹೈನುಗಾರಿಕೆ, ಮೀನುಗಾರಿಕೆ, ತೋಟಗಾರಿಕೆ, ಜೇನುಕೃಷಿ, ಕೋಳಿ ಸಾಕಾಣಿಕೆ, ಹಾಲು ಉತ್ಪಾದನೆ ಇತ್ಯಾದಿ ಹವ್ಯಾಸವಾಗಿ ಬೆಳಸಿಕೊಂಡಿದ್ದಾರೆ. ಕೃಷಿ ರಂಗ ಕೂಡಾ ಲಾಭದಾಯಕ ಉದ್ಯಮವಾಗಿದೆ. ಸ್ವಾವಲಂಬನೆ ಬದುಕು ಸಾಗಿಸಲು ಇದು ಒಂದು ಉತ್ತಮ ದಾರಿಯಾಗಿದೆ. ಲಾಕ್‌ಡೌನ್‌ನಲ್ಲಿ ಹವ್ಯಾಸವಾಗಿ ಆರಂಭಿಸಿದ ಕೃಷಿಯನ್ನೇ ಜೀವನ ಮಾರ್ಗವಾಗಿ ಹಲವರು ಬದಲಾಯಿಸಿದ್ದಾರೆ. ರಾಜ್ಯ ಸರಕಾರ ಯುವ ಕೃಷಿಕರಿಗೆ ಆರ್ಥಿಕ ಸೌಲಭ್ಯ ನೀರಾವರಿ ಯೋಜನೆ ಕಲ್ಪಿಸುವುದರಿಂದ ಕೃಷಿಯಲ್ಲಿ ಕ್ರಾಂತಿಯುಂಟಾಗಲು ಶ್ರಮಿಸಬಹುದು.

- ಸಣ್ಣ ಮಟ್ಟದಲ್ಲಿ ಕೃಷಿ ಆರಂಭಿಸಲು ಹಣದ ಕೊರತೆಯೂ ಹೆಚ್ಚಾಗಿರುತ್ತದೆ ಪ್ರೋತ್ಸಾಹ ಧನದ ಅಗತ್ಯತೆ ಇರುವುದರಿಂದ ಹಾಗೂ ಕೃಷಿಯ ಕಡೆಗೆ ಯುವಕರು ಹೆಚ್ಚಾಗಿ ಆಕರ್ಷಿಸಲು ವಿಶೇಷ ಅನುದಾನದ ಮೂಲಕ ಬಡ್ಡಿರಹಿತ ಸಾಲ ಸೌಲಭ್ಯ ಒದಗಿಸಬೇಕು.
- ಯುವ ಸಮುದಾಯವು ಕೃಷಿಯ ಬಗ್ಗೆ ಆಸಕ್ತಿಯನ್ನು ಹೊಂದಿದ್ದಾರೆ. ಆದರೂ ಸಂಪೂರ್ಣ ಮಾಹಿತಿಯ ಕೊರತೆ ಇರುತ್ತದೆ. ಮಣ್ಣಿನ ಗುಣಮಟ್ಟ, ನೀರಿನ ಪ್ರಮಾಣ, ಬಿತ್ತನೆ ಇತ್ಯಾದಿಗಳ ಬಗ್ಗೆ ವಿವರಿಸುವ ಮಾಹಿತಿ ಕೇಂದ್ರಗಳನ್ನು ತೆರೆಯಬೇಕು ಮತ್ತು ವಾರ್ಡ್ ಮಟ್ಟದಲ್ಲಿ ಕೃಷಿ ಕಾರ್ಯಾಗಾರವನ್ನು ಆಯೋಜಿಸಬೇಕು.
- ತೋಟಗಾರಿಕೆ ಇಲಾಖೆಯಲ್ಲಿ ಖಾಲಿಯಿರುವ 40% ಉದ್ಯೋಗವನ್ನು ಆದಷ್ಟು ಬೇಗ ಭರ್ತಿ ಮಾಡಬೇಕು.
- ಮನೆ ಮನೆಗಳಲ್ಲಿ ಪರಿಸರ ಮತ್ತು ಕೃಷಿಯ ಬಗ್ಗೆ ಅರಿವು ಮೂಡಿಸಲು ವಾರ್ಡ್ ಮಟ್ಟದಲ್ಲಿ ಪ್ರತೀ ವರ್ಷ ಉಚಿತ ಫಲ ಪುಷ್ಪಗಳ ಗಿಡಗಳನ್ನು ಹಾಗೂ ಬೀಜಗಳನ್ನು ವಿತರಿಸಬೇಕು.

ಶಿಕ್ಷಣ ಮತ್ತು ಮಾನವ ಹಕ್ಕುಗಳು:

ಶಿಕ್ಷಣವನ್ನು ಪದವಿವರೆಗೆ ಉಚಿತಗೊಳಿಸಬೇಕು. ಅಲ್ಪಸಂಖ್ಯಾತರ ಮತ್ತು ಕೆಳವರ್ಗದ ವಿದ್ಯಾರ್ಥಿಗಳ ಉನ್ನತ ಶಿಕ್ಷಣದ ಬಗ್ಗೆ ಹೆಚ್ಚಿನ ಕಾಳಜಿ ವಹಿಸಬೇಕು. ಪ್ರಕೃತಿ ವಿಕೋಪ ಹಾಗೂ ಯುದ್ಧಗಳ ಕಾರಣದಿಂದಾಗಿ ವಿದೇಶಗಳಲ್ಲಿ ಶಿಕ್ಷಣ ಮೊಟಕುಗೊಂಡ ವಿದ್ಯಾರ್ಥಿಗಳ ಭವಿಷ್ಯದ ಬಗ್ಗೆ ಆಲೋಚಿಸಬೇಕು. ಸ್ಥಗಿತಗೊಂಡಿರುವ ಅಲ್ಪಸಂಖ್ಯಾತ ವಿದ್ಯಾರ್ಥಿಗಳ ವಿದ್ಯಾರ್ಥಿ ವೇತನವನ್ನು ಪುನರಾರಂಭಿಸಬೇಕು.

- ಯುವಕರು ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಭಾಗವಹಿಸಲು ಆರ್ಥಿಕ ನೆರವು ನೀಡಬೇಕು ಮತ್ತು ಪ್ರತಿ ಜಿಲ್ಲೆಯಲ್ಲಿ ಒಂದು ಅತ್ಯಾಧುನಿಕ ತಂತ್ರಜ್ಞಾನಗಳನ್ನೊಳಗೊಂಡ ಗ್ರಂಥಾಲಯ ನಿರ್ಮಿಸಬೇಕು ಹಾಗೂ

ಉಚಿತ ತರಬೇತಿಗಳನ್ನು ಸರ್ಕಾರದ ವತಿಯಿಂದ ಆಯೋಜಿಸಬೇಕು.

- ಯುವಕರನ್ನು ಕೋಮುವಾದಿ ಚಿಂತನೆಗಳು ಮತ್ತು ಭಯೋತ್ಪಾದನೆಗೆ ಪ್ರೇರೇಪಿಸುವ ಭಾಷಣ, ಹೇಳಿಕೆಯ ಬಗ್ಗೆ ತೀವ್ರ ನಿಗಾ ವಹಿಸಬೇಕು. ನೈತಿಕ ಪೋಲೀಸ್ ಗಿರಿಯ ಮೇಲೆ ಕಟ್ಟು ನಿಟ್ಟಿನ ಕ್ರಮ ಕೈಗೊಳ್ಳಬೇಕು. ಕೋಮು ಭಾವನೆ ಕೆರಳಿಸುವ ಮಾದ್ಯಮ ವರದಿಗಳನ್ನು ಮತ್ತು ಕಾರ್ಯಕ್ರಮಗಳನ್ನು ತಡೆಹಿಡಿಯಬೇಕು. ಕೋಮು ಸೌಹಾರ್ದಕ್ಕೆ ಪೂರಕವಾದ ಕಾರ್ಯಕ್ರಮಗಳನ್ನು ಸರ್ಕಾರ ಆಯೋಜಿಸಬೇಕು.
- ಪರಿಸರ ರಕ್ಷಣೆ ಮತ್ತು ಸ್ವಚ್ಛತಾ ಕಾರ್ಯದಲ್ಲಿ ಯುವಕರನ್ನು ಸರ್ಕಾರ ವಿಶೇಷವಾಗಿ ತೊಡಗಿಸಿಕೊಳ್ಳಬೇಕು. ರಕ್ತದಾನ ಶಿಬಿರಗಳನ್ನು ಪ್ರೋತ್ಸಾಹಿಸಬೇಕು. ಜೀವಮಾನ ಸಾಧನೆಗಾಗಿ ವಾರ್ಡ್ ಮಟ್ಟದಲ್ಲಿ ಗೌರವಿಸಬೇಕು.
- ತಳ ಸಮುದಾಯದ ಯುವತಿಯರಿಗಾಗಿ ಮಾಂಗಲ್ಯ ನೆರವು ತಲಾ ಒಂದು ಲಕ್ಷದವರೆಗೆ ನೀಡಬೇಕು. ಅಲ್ಪಸಂಖ್ಯಾತರಿಗೆ ನೀಡಲಾಗುತ್ತಿದ್ದ ಶಾದಿ ಭಾಗ್ಯ ಯೋಜನೆ ಪುನರಾರಂಭಿಸಬೇಕು.
- ಯುವ ಸಬಲೀಕರಣ ಮತ್ತು ಶಿಕ್ಷಣಕ್ಷೇತ್ರಕ್ಕೆ ರಾಜ್ಯ ಬಜೆಟ್ ನಲ್ಲಿ ಶೇಕಡ 18 ಮೀಸಲಿಡಬೇಕು.
- ಸಾರ್ವಜನಿಕವಾಗಿ ವ್ಯಾಪಕ ಟೀಕೆಗೆ ಒಳಗಾಗಿರುವ ರಾಷ್ಟ್ರೀಯ ಶಿಕ್ಷಣ ನೀತಿಯನ್ನು ಸಂವಿಧಾನದ ಒಕ್ಕೂಟ ತತ್ವಗಳಿಗನುಗುಣವಾಗಿ ಪರಾಮರ್ಶಿಸಿ ರಾಜ್ಯದ ಅಗತ್ಯತೆ ತಕ್ಕಂತೆ ರಾಜ್ಯ ಶಿಕ್ಷಣ ನೀತಿಯನ್ನು ರೂಪಿಸಬೇಕು.
- ಗುಂಪು ಹಲ್ಲೆ ಮತ್ತು ನೈತಿಕ ಪೋಲಿಸ್ ದಾಳಿಯ ಪ್ರಕರಣಗಳು ರಾಜ್ಯದಲ್ಲಿ ನಿರಂತರ ಹೆಚ್ಚಾಗುತ್ತಿದೆ. ಕಾನೂನನ್ನು ಕೈಗೆತ್ತಿಕೊಳ್ಳುವವರ ವಿರುದ್ಧ ಸುಪ್ರೀಂ ಕೋರ್ಟ್ ಮಾರ್ಗಸೂಚಿಗಳನ್ವಯ ಸೂಕ್ತ ಕ್ರಮ ಕೈಗೊಳ್ಳಬೇಕು.
- ಮಾನವ ಹಕ್ಕುಗಳ ಸಂರಕ್ಷಣೆಗಾಗಿ ಸ್ಥಾಪಿಸಲಾಗಿರುವ ರಾಜ್ಯ ಮಾನವ ಹಕ್ಕುಗಳ ಆಯೋಗ, ಎಸ್.ಸಿ ಮತ್ತು ಎಸ್.ಟಿ ಆಯೋಗ, ಮಹಿಳಾ ಆಯೋಗ, ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ ಹಾಗೂ ರಾಜ್ಯ ಅಲ್ಪಸಂಖ್ಯಾತರ ಆಯೋಗಗಳಿಗೆ ಸೂಕ್ತ ವ್ಯಕ್ತಿಗಳನ್ನು ನೇಮಿಸಿ, ಹೆಚ್ಚಿನ ಅನುದಾನವನ್ನು ಒದಗಿಸುವುದರ ಜೊತೆಗೆ ವಿಶೇಷ ಅಧಿಕಾರವನ್ನು ನೀಡಬೇಕು.

ಮುಂದಿನ ದಿನಗಳಲ್ಲಿ ಇವಿಷ್ಟು ವಿಷಯದ ಮೇಲೆ ಸಾಲಿಡಾರಿಟಿ ಯೂತ್ ಮೂವ್‌ಮೆಂಟ್ ರಾಜ್ಯದ ಎಲ್ಲ ಕ್ಷೇತ್ರದ ಜನ ಪ್ರತಿನಿಧಿಗಳನ್ನು ಭೇಟಿಯಾಗಿ ಸರ್ಕಾರದ ಗಮನಕ್ಕೆ ತಂದು ಇದರ ಅನುಷ್ಠಾನಕ್ಕೆ ಗರಿಷ್ಠ ಮಟ್ಟದಲ್ಲಿ ಪ್ರಯತ್ನಿಸಲಿರುವುದು.

Solidarity Youth Manifesto - 2023

Youth is an important segment in human resources. Today, youth constitute about 60% of the state's population. In today's competitive age, the youth community plays a very crucial and active role in various sectors of life be it education, science, technology, sports, art, culture, politics, social life, economics or social media. Henceforth by properly harnessing the youth potential and their opinions, it is possible to develop the state in better way.

Today, the youth & women in the state are facing many social, economic, psychological, health & other issues/problems. In the absence of constructive work & agenda, today's youth are ruining their lives by engaging themselves in various destructive activities like communalism, drug addiction, crimes & boredom. The percentage of incidences of depression and suicide is increasing day by day in youth. Unemployment and lack of educational support are prime reasons for this.

Today's need is to make youth self-reliant and to guide them by providing ample opportunities & organising constructive activities concerning the society & environment. Also, youth needs to be engaged in art, literature and cultural arena to effectively utilise their talents and skills in right direction.

Evaluating all the above-mentioned points, Solidarity Youth Movement, Karnataka has prepared an election manifesto covering important issues associated with Youth empowerment and our country's development, ahead of the upcoming 2023 Karnataka State Legislative Assembly Elections. Detailed recommendations under each head are mentioned below.

Economic Empowerment & Employment:

Economic empowerment is a prime component in youth empowerment. Young people mostly want to live a self-

reliant life. Through economic empowerment especially by generating and providing employment, it is possible to solve many problems faced by youth and society today. As per statistics available with us, currently there are more than 25 lakhs unemployed people in Karnataka. And on other side, due to corruption in government appointments, huge number of jobs are lying vacant like around 2.52 lakhs jobs are lying vacant in government offices & 53,700 posts are unfilled in government schools and PU colleges. Also, in industries sector, 83,190 men and women are unemployed due to the closure of small industries.

As per reports released in April 2022, the country had witnessed the highest unemployment rate of 10.79 percent. And the statistics released by various agencies shows the alarming situation of unemployment like around 50 lakh people have lost their jobs due to demonetisation alone even though there are 62 lakh vacancies in central and state governments out of which 30 lakh jobs are lying vacant in the central government alone. On the other hand, youth are being tricked by opportunists with fake dream of jobs of which PSI recruitment scam is prime example where 1.29 lakh youths fallen prey and became victims of it.

It is disheartening to mention that this economic situation has forced many youths into depression and many of them are fed up with unemployment due to which around 1,129 people committed suicide in the state as per statistics available with us. Presently, India ranks 116 out of 180 countries in the World Bank “Human Capital Index” which is an indicator of efficient mobilization of economic and professional potential of its citizens. Due to few unthoughtful policies, situation is further worsening. For example, only 6 percent of Kannadiga employees are placed in these banks because the rural banking exam has to be written only in Hindi and English. All these issues need to be resolved at the earliest possible to bring the situation under control.

In above scenario, we're proposing following recommendations and remedial actions which can be adopted to eliminate/reduce unemployment:

- A policy should be made to reserve and allow up to 50 percent local youth & women in various positions in all government and private sector companies of Karnataka state.
- Skill development and training centres under “Karnataka Skill Development Corporation” should be set up in all talukas of state to equip the youth with required skill set for employment.
- Monthly Job Fairs & Yearly Job Mela's should be organised in all Constituency through “Karnataka Skill Development Corporation” involving all government and private sector companies.
- “State Level Government Job Portal” should be developed to connect job aspirants with available vacancies in all private and government companies. It should be free of cost for all job seekers. This will help in curtailing the ongoing job scams to some extent.
- All vacancies in state government (around 2.5 Lakh) should be filled in time bound manner within a year to ensure efficient governance & reduction in unemployment.
- During all government recruitment exams especially during recruitment to Army and Police department, special provision for proper accommodation and special travelling arrangement for aspirants should be ensured by state government. Special reservations should be given to backward classes and minorities.
- To ensure employment generation in state, ease of business policies should be framed to ensure roping in of major leading companies in different sectors.
- Karnataka Minimum Wages Act 2023 specifies minimum wages for different categories, however considering the

present inflation, it is recommended to revise the same with at least 50% increment in daily wages in all categories.

- Special self-employment scheme to start petty businesses should be framed whereby grants ranging from Rs 25,000 to Rs 40,000 should be given for establishment and running of identified petty businesses. Street vendors, Tailoring, Graphic designing and other similar categories can be included under this scheme. Persons with income less than 1.5 Lakhs will benefit with this scheme.
- About 80% of registered incubation centres of state are placed in Bengaluru alone. We recommend to establish Start-up Incubators in all major districts of state to promote entrepreneurship among youth of state inline with Startup India Initiative.
- Special scheme to lend interest free loans to start-up started with motive of solving social issues should be framed, whereby loans up to 1 Crore should be given to these social start-ups for up to 3-7 years.
- To promote entrepreneurship among youth from backward communities and minorities, special scheme to lend interest free loans up to 25 Lakhs for 3-5 years should be framed.
- General start-ups which aren't covered under existing schemes like start-up India or other related schemes should be provided with suitable financial assistance and technical mentoring by framing new scheme.
- Under Women Enterprise Development scheme by MSME, maximum project cost should be increased to at least Rs 25Lakhs and interest rates should be brought down to as low as 0%.
- All pending recruitment exams by all government agencies should be conducted within next six months. And pending results & recruitment process of all such

exams should be announced & completed within four months.

- Results declaration, interview & selection process in all government rucruitment exams by all departments of state government should be completed in timely manner. Policy should be made to conclude complete recruitment process within six months.
- Special fast track courts should be formed to check & counter the recruitment scams within government and private sectors and to provide immediate justice to victims. All such cases should be closed in timely manner preferably i.e. within six months.

Sports Empowerment:

Sports is one field about which youth are the most passionate about. Youth will be in good health when they maintain their physical fitness. Out of 240 taluks of the state, only 121 taluks have stadiums. There is a lack of funding in many places. There is also an allegation that the sports and youth empowerment department is not functioning properly after Covid. The sports development of the state is in very bad condition due to lack of proper care for sports and athletes, lack of good coaches & lack of proper availability of sports equipment. Karnataka's representation at the international level is also negligible which should increase significantly. Following are recommendations in Sports category.

- Construction of public stadiums, swimming pools, parks in every taluka. The work of stalled stadiums, sports complexes, pavilions, swimming pools, courts etc. in Dharwad, Hejamadi, Tumkur, Mangalore, Bangalore and various districts of the state should be completed soon.
- To promote rural, traditional and regional sports like kho-kho, wrestling, kabaddi, kambala, bullock cart race, lagori etc. rural sports events should be organised from village level to state level. A well-equipped sports court should

be constructed within each gram panchayat. Special Corporations should be established for regional sports (indoor and outdoor) to promote and maintain them.

- Formulating a new plan for the health of those recognized at the local, district and state levels who have rendered special services in sports. Sportspersons with physical disabilities should be given a monthly pension. Regionally recognized sports persons should be encouraged and complementary schemes should be devised for them to grow at the national and international level.
- Yuvaka Mandala should be established in every village. Sports equipment should be provided free of charge.
- Efforts should be made to increase the representation of women in national and international sports. Secure stadiums dedicated to women only and with accommodation facilities should be constructed in major districts of the state. Well-equipped facilities should be provided for football, basketball, swimming, handball, hockey, tennis, gymnastics sports.
- Only one stadium in Karnataka (M Chinnaswamy Stadium Bangalore) is fit to host full scale international cricket. As the youth in the coastal & Northern region are mostly inclined towards cricket and football, an international level stadium should be built keeping Mangalore & Kalaburgi/Raichur as the centres. (As the project for Mangalore is already underway, the work should start as soon as possible).

Art, Literature and Culture:

In recent days, the participation of youth in art, literature and cultural arena is increasing. As this is a good development, it is the responsibility of the ruling class to support and encourage them. In this regard, work should be done to save and develop the art, literature, music, folklore, cinema, drama and other regional art forms of the country. Youth involvement in the

cultural arena is a positive development but due to lack of funds, many cultural projects have fallen into despair. Many arts and cultural organisations are closing due to financial difficulties. There is also an allegation that unofficial organisations are making huge profits by receiving donations from the Government on the recommendation of few influential people and dignitaries. According to an estimate, there are 7000 cultural organisations in the state, out of which only 900 to 1000 cultural organisations receive grants, while the rest are deprived of grants. Cultural organisations mostly in North Karnataka are facing this problem which needs to be addressed.

- Transparency should be shown in grants in the form of donations given to cultural associations. A cultural review committee should be formed as demanded by renowned literature professor Prof.SG Siddaramaiah.
- Many young artists are making their debut in theatre but lack of theatre is a big problem faced by artists of the state. Except Bangalore, Mysore, Dharwad, most of the districts of the state do not have fully equipped theatres with advanced technologies. In most places, there are no suitable government platforms for drama, music, literature, cultural art performances and cultural festivals, hence most of them rely on private welfare centres. Therefore, theatres should be constructed in all taluks. Mini theatres should be constructed in Bangalore, Mangalore, Tumkur and Davangere which are growing as smart cities. Kala Bhavan, Theatre, Town Hall, Open Air Theatre are required in every district.
- Today's specialty is that new youngsters are making their debut in the film industry. New generation cinema is the demand of the times where youth are coming with new tastes in movies. Therefore, provision of a special loan facility to youth for producing the movies/short films should be considered especially for films with social

concerns. A special grant in the name of late actor Puneeth Rajkumar should be released to encourage young film talents. The work on Chitranagari, which has already been announced, should be started as soon as possible.

- Several young writers are emerging in Kannada, regional languages & other international languages. Publication of works is a problem and special grant should be released to publish the works of young writers.
- A new plan should be put in place to save endangered regional folk arts.

Health:

Health is essential to the happiness and well-being of young people. It also helps them in becoming financially empowered. It plays an important role in the development of the state. Illness and malnutrition are the biggest problems faced by today's society especially youth and women. Along with contracting diseases like heart attack, stroke, cancer, they are also becoming victims of drug addiction. The number of suicide cases due to mental depression is also increasing. Anxiety is a serious problem among young women. In view of this, we recommend following steps under this head.

- Right to Healthy Life is an integral part of "Right to Dignified Life" as enshrined in our constitution. Hence steps should be taken to provide free universal health care to all citizens. Presently only few diseases are covered under various schemes of government but it is need of the hour to cover all diseases under different scheme and ensure free healthcare to all citizens. Also, the eligibility criteria's for these schemes should be revised to allow more citizens get benefitted.
- All Taluk and District Government Hospitals should be made well equipped and functional with latest medical facilities available for treatment of all types of diseases.

- Today 18% of the youth & women of the state are suffering from mental depression due to various kind of family or personal problems and suicide cases are noticed in few of them. This should be considered as one of the biggest problems faced by the state today. Suicide rate is increasing day by day especially after covid pandemic. Hence, a counselling centre should be opened in every village health centre for young men/women facing mental depression due to various reasons. Also, planning should be done to make it more functional and accessible.
- Drug addiction is a serious problem which is leading many to poverty, unemployment, extremism and spread of various diseases in the state. Government should take strict measures to eliminate drug addiction. Rehabilitation centres, de-addiction centres and counselling centres should be opened in every area to counsel the addicts and bring the them to the right path.
- A special force should be deployed to crack down on drug trafficking networks spread across villages and towns. Those arrested in this regard should be counselled without immediate release.
- Free gyms and yoga training centres should be opened at village level.

Agriculture:

In recent days, youths are showing interest towards agriculture. Dairy farming, fishing, horticulture, beekeeping, poultry farming, milk production etc. are taken up as hobbies. Agriculture is also a profitable business. This is a great way to lead a self-reliant life. Many people have made farming as a way of life, which started as a hobby during the lockdown. The state government can strive to bring about a revolution in agriculture by providing financial facilities to young farmers in irrigation schemes.

- There is lack of funds to start agriculture at small scale. Incentives & interest free loan facility through special grants can attract more youth towards agriculture which is backbone of Indian economy.
- The youth community is interested in agriculture. However, adequate information is lacking. Information centres explaining about soil quality, water quantity, sowing procedures etc should be extended and agricultural workshops should be organised at ward levels.
- 40% vacancies in the Horticulture Department should be filled as soon as possible.
- Seeds of fruit, vegetables & flower plants should be distributed free of cost every year at ward level to motivate masses for kitchen gardening and to help create awareness about environment and agriculture in households.

Education & Human rights:

- Education should be made free of cost up to graduation. Greater concern should be given to the higher education of minorities and backward classes students.
- Special arrangement should be done to safeguard future of students whose education is disturbed in foreign countries due to natural calamities and wars.
- Scholarships for minority students which have been suspended should be resumed immediately.
- Financial assistance should be provided to interested youth to get coaching for competitive examinations.
- Libraries with all academic books and advanced technologies should be built in every district and free coaching classes for competitive exams should be provided by the government.
- Speeches and statements that incites youth towards communalism and terrorism should be strictly monitored. Strict action should be taken against moral

policing. Media reports and programs inciting communal sentiments should be monitored and stopped. The government should organise programs to promote communal harmony and brotherhood.

- Government should especially involve & encourage the youth in all its programs related to environment protection, cleanliness work and social service works like Blood donation camps. Identified youth working in these arena's should be honoured at ward/Taluk and District level.
- Mangalya assistance' should be given up to one lakh each for women belonging to the lower castes. Shaadi Bhagya Yojana which was being given to minorities should be restarted.
- 18 percent of the state budget should be reserved for youth empowerment and Education.
- The National Education Policy, which has been widely criticised by the public, should be reviewed in accordance with the federal principles of the Constitution and the State Education Policy should be formulated as per the needs of the State.
- Cases of mob lynching and moral policing are on the rise in the state. Appropriate action should be taken against the violators of the law as per Supreme Court guidelines.
- The State Human Rights Commission, SC and ST Commission, Women's Commission, Child Rights Protection Commission and State Minority Commissions established for the protection of human rights should appoint suitable persons, and give special powers and provide more grants.

In coming days, the Solidarity Youth Movement-Karnataka will meet the people's representatives of all regions of the state and will discuss the above recommendations with them so that the newly elected state government accepts and implement these recommendations for welfare & progress of our state.

SOLIDARITY
YOUTH MOVEMENT KARNATAKA

ಸಾಲಿಡಾರಿಟಿ ಯೂತ್ ಮೂವ್‌ಮೆಂಟ್ ಕರ್ನಾಟಕ

SOLIDARITY YOUTH MOVEMENT KARNATAKA
Shanthi Sadan, 1st Floor No. 52, 2nd Main
1st Block, R.T. Nagar, Bangalore-560032
080 23534405, 25924059
solidarityymkar@gmail.com